ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪಿಜಿನೀಟ್/2023 ದಿನಾಂಕ: 24-09-2023

ಪ್ರಕಟಣೆ

**ಪಿಜಿ ದಂತ ವೈದ್ಯಕೀಯ ಕೋರ್ಸುಗಳಿಗೆ 2023ನೇ ಸಾಲಿಗೆ NEET MDS 2023 ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿರುವ ಹಿನ್ನಲೆಯಲ್ಲಿ ನೊಂದಣಿ, ದಾಖಲಾತಿ ಪರಿಶೀಲನೆ**

MoHFW ರ ಪತ್ರ ಸಂಖ್ಯೆ U-12021/02/2023-MEC dated 22.09.2023, ಅನ್ವಯ, 2023ನೇ ಸಾಲಿನ ಪಿಜಿ ದಂಥ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ NEETMDS 2023 ಕನಿಷ್ಠ ಅರ್ಹತೆಯನ್ನು ಕಡಿಮೆ ಮಾಡಿರುವುದಾಗಿ (percentile by 31.807) MCC, New Delhi ಇವರು 22-09-2023 ರಂದು ತಮ್ಮ ವೆಬ್‌ಸೈಟಿನಲ್ಲಿ notice ಪ್ರಕಟಿಸಿರುತ್ತಾರೆ.

*2023ನೇ ಸಾಲಿನ **ಪಿಜಿ ದಂತ ವೈದ್ಯಕೀಯ ಕೋರ್ಸುಗಳ** ಪ್ರವೇಶಕ್ಕಾಗಿ ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ, ಆನ್‌ಲೈನ್ ನೊಂದಣಿ, ಅರ್ಜಿ ಸಲ್ಲಿಸಲು ಹಾಗು ಶುಲ್ಕ ಪಾವತಿಸಲು ಪ್ರಾಧಿಕಾರದ ಪೋರ್ಟಲ್ ಅನ್ನು ತೆರೆಯಲಾಗಿದೆ. ಅರ್ಹಗೊಳ್ಳುವ ಇಚ್ಛೆಯುಳ್ಳ ಅಭ್ಯರ್ಥಿಗಳು ಸೇವಾ ನಿರತ ಅಭ್ಯರ್ಥಿಗಳೂ ಸೇರಿದಂತೆ ದಿನಾಂಕ **24-09-2023** ರ ಮ. **2.00** ರಿಂದ **25-09-2023** ರ ರಾತ್ರಿ 11.59 ರವರೆಗೆ ಆನ್‌ಲೈನ್ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಬಹುದಾಗಿದೆ ಹಾಗು ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳ ಹಂಚಿಕೆಯಲ್ಲಿ ಇತರೆ ಅಭ್ಯರ್ಥಿಗಳ ಜೊತೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಬಹುದಾಗಿದೆ.*

ಇಲ್ಲಿಯವರೆಗೆ ನೊಂದಣಿ ಮಾಡದಿರುವ ***ಪಿಜಿ ದಂತ ವೈದ್ಯಕೀಯ*** ಅರ್ಹ ಅಭ್ಯರ್ಥಿಗಳೂ ಸಹ ನೊಂದಣಿ ಮಾಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ. NEET-PG2023 ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ವಿದ್ಯಾರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ.

**Please read the instructions on participating in the documents verification hosted separately. Clause code 'Y' (non-Karnataka) candidates who register newly NEED NOT appear for document verification in KEA on 26-09-2023. But, if they have claimed NRI ward or Minority Religious (CHRISTIAN / MUSLIM) then only they have to appear for verification of documents on 26-09-2023 as per the schedule.**

ಈ ಮೇಲಿನ ದಿನಾಂಕಗಳಂದು ನೊಂದಣಿ ಮಾಡಿ ಶುಲ್ಕವನ್ನು ಪಾವತಿಸುವ ***ಪಿಜಿ ದಂತ ವೈದ್ಯಕೀಯ*** ಅಭ್ಯರ್ಥಿಗಳು (except 'Y' clause) ಮೂಲ ದಾಖಲೆಗಳ ಪರಿಶೀಲನೆ ಹಾಗು deposit ಮಾಡುವುದಕ್ಕಾಗಿ ದಿನಾಂಕ 26-09-2023 ರಂದು ಕೆಇಎ, ಬೆಂಗಳೂರು ಇಲ್ಲಿ ಎಲ್ಲಾ ಅವಶ್ಯ ಮೂಲ ದಾಖಲೆಗಳು ಮತ್ತು ಎರಡು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು – ವರದಿ ಮಾಡಿಕೊಳ್ಳುವುದು.

ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ್ದರಿಂದ ಅರ್ಹತೆ ಪಡೆಯುವ ***ಪಿಜಿ ವೈದ್ಯಕೀಯ*** ಅಂಗವಿಕಲ ಅಭ್ಯರ್ಥಿಗಳು ದಿನಾಂಕ **25-09-2023** ರಂದು ಬೆಳಿಗ್ಗೆ 11.00 ವೈದ್ಯಕೀಯ ಪರಿಶೀಲನೆಗೆ ಕೆಇಎ, ಬೆಂಗಳೂರು ಇಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು.

ಮಾರ್ಪಡಿಸಿದ ಎರಡನೇ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

**ಗಮನಿಸಿ:**

1. ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.
2. ಮುಂದಿನ ಯಾವುದೇ ಸುತ್ತಿನ ಸೀಟು ಹಂಚಿಕೆಗೆ ಆನ್‌ಲೈನ್ ನೊಂದಣಿ ಮಾಡಿಕೊಳ್ಳಲು / ಅರ್ಜಿ ಸಲ್ಲಿಸಲು ಅವಕಾಶಗಳನ್ನು ನೀಡಲಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in